**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ:ಎ8/ಎನ್ಎಸ್‌ಕ್ಯೂಎಫ್ ಅಧಿಸೂಚನೆ/ಏಪ್ರಿಲ್-2020/24/2019-20 ದಿನಾಂಕ:17.09.2019

# ಅಧಿಸೂಚನೆ

ವಿಷಯ:- 2020ನೇ ಸಾಲಿನ ಎನ್.ಎಸ್.ಕ್ಯೂ.ಎಫ್. ಯೋಜನೆ ಅನುಷ್ಠಾನ ಮತ್ತು ಪರೀಕ್ಷಾ ಪದ್ಧತಿ ಕುರಿತು ಮಾರ್ಗಸೂಚಿ.

ಉಲ್ಲೇಖ:-1)ಸರ್ಕಾರದ ಆದೇಶದ ಸಂಖ್ಯೆ:ಇಡಿ.59.ಎಂ.ಸಿ.ಡಿ.2016, ಬೆಂಗಳೂರು,ದಿನಾಂಕ:16.06.2016.
2)ಮಂಡಳಿ ಅಧಿಸೂಚನೆ ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿನಾಂಕ: 30.08.2019.

********

ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (National Skill Qualification Framework) (ಎನ್.ಎಸ್.ಕ್ಯೂ.ಎಫ್) ಕೇಂದ್ರ ಸರ್ಕಾರದ ನೂತನ ಯೋಜನೆಯಾಗಿದೆ. ಈ ಎನ್ಎಸ್‌ಕ್ಯೂಎಫ್ ಯೋಜನೆಯನ್ನು ಕೇಂದ್ರ ಸರ್ಕಾರವು ಒಟ್ಟು 250 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಅನುಷ್ಠಾನ ಮಾಡಲು ಒಪ್ಪಿಗೆ ನೀಡಿದೆ. 2014-15ನೇ ಸಾಲಿನಿಂದ ರಾಜ್ಯ ಸರ್ಕಾರವು ಪ್ರಾಯೋಗಿಕವಾಗಿ ಈ ಯೋಜನೆಯನ್ನು 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. 2018-19ನೇ ಸಾಲಿನಲ್ಲಿ 50 ಶಾಲೆಗಳಲ್ಲಿ ಹೆಚ್ಚುವರಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶ ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣದ ವಿಷಯಗಳನ್ನು ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ಅಳವಡಿಸಿ, ಉದ್ಯೋಗ ನಿರ್ವಹಿಸಲು ಅಗತ್ಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳ ಬಗ್ಗೆ ತರಬೇತಿಯನ್ನು ನೀಡುವುದಾಗಿದೆ. ಈ ಯೋಜನೆಯು ವಿದ್ಯಾರ್ಥಿಗಳಿಗೆ ಸ್ವಯಂಪ್ರೇರಿತವಾಗಿದ್ದು, ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮಾತ್ರ ಆಯ್ಕೆ ಮಾಡಿಕೊಳ್ಳಬಹುದಾಗಿದೆ. 9 ರಿಂದ 12ನೇ ತರಗತಿಯವರೆಗೂ, ತದನಂತರ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿ.ಹೆಚ್.ಡಿ. ವರೆವಿಗೂ ಒಟ್ಟು 10 ಹಂತಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದ್ದು, ಇದೊಂದು ನಿರಂತರ ಮುಂದುವರಿಕೆ ಯೋಜನೆಯಾಗಿರುತ್ತದೆ. ಮಾರ್ಗಸೂಚಿಯ ಪ್ರಕಾರ ಸದರಿ ಯೋಜನೆಯನ್ನು ಆರ್.ಎಂ.ಎಸ್.ಎ. ಅಡಿಯಲ್ಲಿ ಅನುಷ್ಠಾನ ಮಾಡಲು ಅವಕಾಶ ಕಲ್ಪಿಸಿದೆ.

ಈ ಯೋಜನೆಯು ಕೈಗಾರಿಕಾ ಚಾಲಿತ ಕಾರ್ಯಕ್ರಮವಾಗಿದೆ. ಪಠ್ಯವಿಷಯ ಸಿದ್ಧಪಡಿಸುವುದರಿಂದ ಹಿಡಿದು ತರಬೇತಿದಾರರ ಆಯ್ಕೆ, ತರಬೇತಿ, ಮೌಲ್ಯಮಾಪನ, ಪ್ರಮಾಣಪತ್ರ ಮತ್ತು ಉದ್ಯೋಗ ದೊರಕಿಸಿಕೊಡುವವರೆವಿಗೂ ಉದ್ಯಮದಾರರ ಸಹಭಾಗಿತ್ವದಲ್ಲೇ ನಿರ್ವಹಿಸುವುದಾಗಿರುತ್ತದೆ. ಈ ಸಂಬಂಧ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮದ (ಎನ್.ಎಸ್.ಡಿ.ಸಿ) ಜೊತೆ ಒಪ್ಪಂದ ಕೂಡ ಮಾಡಿಕೊಳ್ಳಲಾಗಿದೆ.

ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೋಟಿವ್, ಹೆಲ್ತ್‌ಕೇರ್, ಬ್ಯೂಟಿ ಮತ್ತು ವೆಲ್‌ನೆಸ್ ಸೆಕ್ಟಾರ್‌ಗಳನ್ನು ಈ ಯೋಜನೆಯಲ್ಲಿ ಅಳವಡಿಸಲಾಗಿದೆ. ಆಯ್ಕೆಯಾದ ಪ್ರೌಢ ಶಾಲೆಗಳಲ್ಲಿ ಎರಡು ಸೆಕ್ಟಾರ್‌ಗಳನ್ನು ಅಳವಡಿಸುವುದು ಹಾಗೂ ಪ್ರತಿ ಹಂತದ ಪ್ರತಿ ಸೆಕ್ಟಾರ್‌ಗೆ ಗರಿಷ್ಟ 25 ವಿದ್ಯಾರ್ಥಿಗಳನ್ನು ದಾಖಲಿಸುವುದು.ಆಂತರಿಕ ಮೌಲ್ಯಮಾಪನಕ್ಕೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ(Continuous and Comprehensive Evaluation) ಪದ್ಧತಿಯನ್ನು ಅಳವಡಿಸುವುದು.

ಸರ್ಕಾರದ ಆದೇಶದ ಸಂಖ್ಯೆ:ಇಡಿ.59.ಎಂ.ಸಿ.ಡಿ.2016, ದಿನಾಂಕ:16.06.2016 ರನ್ವಯ ರಾಜ್ಯದ ಆಯ್ದ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ರಾಷ್ಟ್ರೀಯ ವೃತ್ತಿ ಶಿಕ್ಷಣ ಕೌಶಲ್ಯ ಚೌಕಟ್ಟು ಯೋಜನೆಯಡಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಪರೀಕ್ಷಾ ಪದ್ಧತಿಯಲ್ಲಿ ಈ ಕೆಳಕಂಡ ಬದಲಾವಣೆ ಮಾಡಿಕೊಳ್ಳಲು ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಕೆಳಕಂಡ ಷರತ್ತುಗಳಂತೆ ಅನುಮತಿಸಿ ಆದೇಶಿಸಲಾಗಿದೆ.

ಷರತ್ತುಗಳು:–

1. 9 ಮತ್ತು 10ನೇ ತರಗತಿಯಲ್ಲಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ತೃತೀಯ ಭಾಷೆಯಿಂದ ವಿನಾಯಿತಿ ಪಡೆದಿರುತ್ತಾರೆ.
2. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ತಾತ್ವಿಕ(ಥಿಯರಿ) ಪರೀಕ್ಷೆಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಯು ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸೆಕ್ಟರ್ ಸ್ಕಿಲ್ ಕೌನ್ಸಿಲ್ ಸಂಸ್ಥೆಗಳ ಮೂಲಕ ನಡೆಸಲಾಗುವುದು.
3. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಈ ಕೆಳಗಿನಂತೆ ಪರೀಕ್ಷೆಗಳನ್ನು ನಡೆಸಲಾಗುವುದು:–
   ಎ)ಆಂತರಿಕ ಮೌಲ್ಯಮಾಪನ –20 ಅಂಕಗಳು
   ಬಿ)ತಾತ್ವಿಕ(ಥಿಯರಿ)ಪರೀಕ್ಷೆ –30 ಅಂಕಗಳು
   ಸಿ)ಪ್ರಾಯೋಗಿಕ ಪರೀಕ್ಷೆ .–50 ಅಂಕಗಳು
4. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಅಯಾ ವಿಷಯದಲ್ಲಿ ತೇರ್ಗಡೆಯಾಗಲು ತಾತ್ವಿಕ ಪರೀಕ್ಷೆಯಲ್ಲಿ ಕನಿಷ್ಟ 10 ಅಂಕಗಳನ್ನು ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ 18 ಅಂಕಗಳನ್ನು ಗಳಿಸಬೇಕು. ಆಂತರಿಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ವಿದ್ಯಾರ್ಥಿಗೆ ನೀಡಲಾಗುವ ಪ್ರಮಾಣ ಪತ್ರದಲ್ಲಿ ನಮೂದಿಸಲಾಗುವುದು. ಇದನ್ನು ಅಭ್ಯರ್ಥಿಯ ತೇರ್ಗಡೆಗೆ ಪರಿಗಣಿಸಲಾಗುವುದಿಲ್ಲ.
5. ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡುವಾಗ ಈಗಿನ ಒಂದೇ ಅಂಕಪಟ್ಟಿ ಪದ್ಧತಿಯನ್ನು ಮುಂದುವರೆಸುವುದು ಹಾಗೂ ಅದರಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳತಕ್ಕದ್ದು.
6. ವೃತ್ತಿ ಶಿಕ್ಷಣದ ತಾತ್ವಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳಲ್ಲಿ ಅಭ್ಯರ್ಥಿಯು ತೇರ್ಗಡೆ ಹೊಂದದಿದ್ದಲ್ಲಿ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದು.
7. ತಾತ್ವಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ, ಪ್ರಾಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದಲ್ಲಿ ಪುನರಾವರ್ತಿತ ಅಭ್ಯರ್ಥಿಯಾಗಿ ತಾತ್ವಿಕ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಪುನ: ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.
8. ವೃತ್ತಿ ಶಿಕ್ಷಣದ ವಿಷಯವನ್ನು ವಿನಾಯಿತಿ ಪಡೆದ ಭಾಷೆಗೆ ಸಮಾನಾಂತರ ಎಂದು ಪರಿಗಣಿಸಲಾಗುವುದು.

**II. ಭಾಷಾ ವಿನಾಯಿತಿ:–**

ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಅವರು ವ್ಯಾಸಂಗ ಮಾಡುವ ತರಗತಿಯ ಒಂದು ವಿಷಯದಲ್ಲಿ ವಿನಾಯಿತಿ ನೀಡುವಂತೆ ಕೇಂದ್ರ ಸರ್ಕಾರ ತಿಳಿಸಿರುತ್ತದೆ. ಈ ಸಂಬಂಧ ಉಲ್ಲೇಖ–1ರ ಸರ್ಕಾರಿ ಆದೇಶದನ್ವಯ ಈ ಕೆಳಕಂಡಂತೆ ಒಂದು ಭಾಷಾ ವಿಷಯದಲ್ಲಿ ವಿನಾಯಿತಿಯನ್ನು ನೀಡಲು ನಿರ್ಧರಿಸಿದೆ.

**(a) 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ – ತೃತೀಯ ಭಾಷೆ ಅಭ್ಯಾಸ ಮಾಡುವುದರಿಂದ ವಿನಾಯತಿ:**

**9ನೇ ತರಗತಿ (ಮೊದಲನೇ ಹಂತ)**

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ಪ್ರಥಮ ಭಾಷೆ | 100 |
| 2 | ದ್ವಿತೀಯ ಭಾಷೆ | 100 |
| 3 | ತೃತೀಯ ಭಾಷೆ ಬದಲಿಗೆ ವೃತ್ತಿ ಶಿಕ್ಷಣದ ಒಂದು ವಿಷಯ | 100 |
| 4 | ಗಣಿತ | 100 |
| 5 | ಸಮಾಜ ವಿಜ್ಞಾನ | 100 |
| 6 | ವಿಜ್ಞಾನ | 100 |
| | ಒಟ್ಟು ಅಂಕಗಳು | **600** |

* ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಯು ತೃತೀಯ ಭಾಷೆಯ ಬದಲು ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೋಟಿವ್, ಹೆಲ್ತ್‌ಕೇರ್ ಮತ್ತು ಬ್ಯೂಟಿ & ವೆಲ್‌ನೆಸ್ ಐದು ಸೆಕ್ಟರ್‌ಗಳಲ್ಲಿ ಹಾಗೂ ಕಾಲಕಾಲಕ್ಕೆ ಅಳವಡಿಸುವ ಒಂದು ಸೆಕ್ಟಾರ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

**(b) 10ನೇ ತರಗತಿ (ಎರಡನೇ ಹಂತ)**

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ಪ್ರಥಮ ಭಾಷೆ | 125 |
| 2 | ದ್ವಿತೀಯ ಭಾಷೆ | 100 |
| 3 | ತೃತೀಯ ಭಾಷೆ ಬದಲಿಗೆ ವೃತ್ತಿ ಶಿಕ್ಷಣದ ಒಂದು ವಿಷಯ | 100 |
| 4 | ಗಣಿತ | 100 |
| 5 | ಸಮಾಜ ವಿಜ್ಞಾನ | 100 |
| 6 | ವಿಜ್ಞಾನ | 100 |
| | **ಒಟ್ಟು ಅಂಕಗಳು** | **625** |

ವೃತ್ತಿ ಶಿಕ್ಷಣ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಯು ತೃತೀಯ ಭಾಷೆಯ ಬದಲು ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೋಟಿವ್, ಹೆಲ್ತ್‌ಕೇರ್ ಮತ್ತು ಬ್ಯೂಟಿ & ವೆಲ್‌ನೆಸ್ ಐದು ಸೆಕ್ಟಾರ್‌ಗಳಲ್ಲಿ ಈ ಹಿಂದೆ ಅಂದರೆ 9ನೇ ತರಗತಿಯಲ್ಲಿ ಆಯ್ಕೆ ಮಾಡಿಕೊಂಡ ಸೆಕ್ಟಾರ್‌ನಲ್ಲಿಯೇ ಮುಂದುವರೆಯುವುದು. 9ನೇ ತರಗತಿಯಲ್ಲಿ ತೃತೀಯ ಭಾಷೆಯಾಗಿ ಆಯ್ಕೆ ಮಾಡಿಕೊಂಡ ವಿಷಯವನ್ನು 10ನೇ ತರಗತಿಯಲ್ಲಿ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

2019-20 ಶೈಕ್ಷಣಿಕ ವರ್ಷದಲ್ಲಿ ಎನ್‌ಎಸ್‌ಕ್ಯೂಎಫ್ ಯೋಜನೆಯಡಿಯಲ್ಲಿ ವೃತ್ತಿ ಶಿಕ್ಷಣಕ್ಕೆ ಹಂತ 1 ಮತ್ತು 2ರಲ್ಲಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ವೃತ್ತಿ ಶಿಕ್ಷಣದ ವಿಷಯಗಳಾದ ಮಾಹಿತಿ ಹಾಗೂ ತಂತ್ರಜ್ಞಾನ, ರೀಟೆಲ್, ಆಟೋಮೋಟಿವ್,ಹೆಲ್ತ್‌ಕೇರ್, ಬ್ಯೂಟಿ ಅಂಡ್ ವೆಲ್‌ನೆಸ್ ವಿಷಯಗಳಿಗೆ 9ನೇ ತರಗತಿಗೆ ಶಾಲಾ ಹಂತದಲ್ಲಿ ಹಾಗೂ 10ನೇ ತರಗತಿಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹಂತದಲ್ಲಿ ಪರೀಕ್ಷೆಯನ್ನು ನಡೆಸಲಾಗುವುದು.

2019-20 ಶೈಕ್ಷಣಿಕ ವರ್ಷಕ್ಕೆ ಮಾರ್ಚ್/ಏಪ್ರಿಲ್ 2020ರಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಂಬಂಧಿಸಿದಂತೆ ದಿನಾಂಕ: 30.08.2019 ರಂದು ಮಂಡಳಿಯಿಂದ ಅಧಿಸೂಚನೆ ಹೊರಡಿಸಿ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗಿದೆ. ಅದರಂತೆ 9 ಮತ್ತು 10ನೇ ತರಗತಿಗೆ ಸಂಬಂಧಿಸಿದ ಎನ್‌ಎಸ್‌ಕ್ಯೂಎಫ್ ವಿದ್ಯಾರ್ಥಿಗಳ ವಿವರಗಳನ್ನು ಎಸ್‌ಎಟಿಎಸ್ ಜಾಲತಾಣದಲ್ಲಿ ದಾಖಲಿಸುವುದು.

2020ರ ಮಾರ್ಚ್/ಏಪ್ರಿಲ್‌ನಲ್ಲಿ ನಡೆಯುವ ಪರೀಕ್ಷೆಗೆ ಸಂಬಂಧಿಸಿದಂತೆ ಹಂತ-1ರಲ್ಲಿ (9ನೇ ತರಗತಿಯಲ್ಲಿ) ತಾತ್ವಿಕ ಹಾಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಮತ್ತು ಹಂತ-2ರಲ್ಲಿ (10ನೇ ತರಗತಿ) ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣ / ಗೈರುಹಾಜರಾಗಿದ್ದಲ್ಲಿ ಪರೀಕ್ಷೆ ಮುಗಿದ ನಂತರ 15 ದಿನಗಳೊಳಗೆ ಮಂಡಳಿಗೆ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

**II(C). ಪರೀಕ್ಷಾ ಪದ್ಧತಿ:-**

1. 9ನೇ ತರಗತಿಯ ತಾತ್ವಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ಪರೀಕ್ಷಾ ಮಂಡಳಿಯು ಸಿದ್ದಪಡಿಸಿ ನೀಡುತ್ತದೆ. ಜಿಲ್ಲಾ ಉಪನಿರ್ದೇಶಕರ ಮುಲಕ ಶಾಲಾ ಮುಖ್ಯಸ್ಥರು ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು ನಡೆಸಿ, ವೃತ್ತಿ ಶಿಕ್ಷಣ ತರಬೇತುದಾರರಿಂದ ಮೌಲ್ಯಮಾಪನ ಮಾಡಿಸಿ, ಫಲಿತಾಂಶವನ್ನು ಪ್ರಕಟಿಸಿ, ಅಂಕಪಟ್ಟಿಯನ್ನು ನೀಡಬೇಕಾಗುತ್ತದೆ.
2. 2018-19ನೇ ಸಾಲಿನಿಂದ 9ನೇ ತರಗತಿ ಪ್ರಾಯೋಗಿಕ ಪರೀಕ್ಷೆಯನ್ನು ಶಾಲಾ ಹಂತದಲ್ಲಿಯೇ ನಡೆಸಲಾಗುವುದು.
3. ವೃತ್ತಿ ಶಿಕ್ಷಣ ಸೆಕ್ಟಾರ್ ತರಬೇತುದಾರರು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಾ ಮಾಡುವುದು ಹಾಗೂ ಮೌಲ್ಯಮಾಪನ ಮಾಡಿದ ಅಂಕಗಳ ಪಟ್ಟಿಯನ್ನು ಸಂಬಂಧಿಸಿದ ಶಾಲಾ ಮುಖ್ಯಸ್ಥರುಗಳಿಗೆ ನೀಡಬೇಕಾಗುತ್ತದೆ. ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ತಾತ್ವಿಕ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಅಂಕಗಳೊಡನೆ ಸಮೀಕರಿಸಿ ಫಲಿತಾಂಶವನ್ನು ಶಾಲಾ ಹಂತದಲ್ಲಿ ಪ್ರಕಟಿಸುವುದು.
4. 9ನೇ ತರಗತಿಯ ವಿದ್ಯಾರ್ಥಿಗಳಿಗೆ ತಾತ್ವಿಕ ಪರೀಕ್ಷೆಯ ಅಂಕಪಟ್ಟಿಯನ್ನು ಶಾಲೆಯ ಮುಖ್ಯಸ್ಥರು ಶಾಲಾ ಮಟ್ಟದಲ್ಲಿಯೇ ನೀಡುವುದು ಹಾಗೂ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನೀಡುವುದು.
5. 10ನೇ ತರಗತಿಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ತಾತ್ವಿಕ ಪರೀಕ್ಷೆಯನ್ನು ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸಂಬಂಧಪಟ್ಟ ಸೆಕ್ಟಾರ್ ಸ್ಕಿಲ್ ಕೌನ್ಸಿಲ್ ಸಂಸ್ಥೆಗಳ ಮೂಲಕ ನಡೆಸಲಾಗುವುದು
6. 10ನೇ ತರಗತಿಯ ವಿದ್ಯಾರ್ಥಿಗಳು ತೃತೀಯ ಭಾಷೆಗೆ ಪರ್ಯಾಯವಾಗಿ Sector Skill ವಿಭಾಗದಲ್ಲಿನ ಒಂದುವಿಷಯದ ಪ್ರಾಯೋಗಿಕ ಪರೀಕ್ಷೆಯನ್ನು Skill Sector council ಸಂಸ್ಥೆಯ ಅಧಿಕೃತ ತರಬೇತುದಾರರು ಮೌಲ್ಯಮಾಪನ ಮಾಡುವುದು ಹಾಗೂ ಅಂಕಪಟ್ಟಿಯನ್ನು ಶಾಲೆಗೆ ನೀಡುವುದು. ಆಂತರಿಕ ಮೌಲ್ಯಮಾಪನದ ಅಂಕಗಳು ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳ ಸಮೀಕರಣವನ್ನು ಶಾಲಾ ಹಂತದಲ್ಲಿ ನಿರ್ವಹಿಸಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ದೃಢೀಕರಣದೊಂದಿಗೆ ಶಾಲಾ ಮುಖ್ಯಸ್ಥರು ಸಲ್ಲಿಸಬೇಕಾಗಿರುತ್ತದೆ. ಮಂಡಳಿಯು ವಿದ್ಯಾರ್ಥಿಯು ತಾತ್ವಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮತ್ತು ಶಾಲೆಗಳಿಂದ ದೃಢಿಕರಿಸಲ್ಪಟ್ಟ ಅಂಕಗಳನ್ನು ಸಮೀಕರಿಸಿ ಒಟ್ಟಾರೆ 100 ಅಂಕಗಳಿಗೆ ಗಳಿಸಿದ ಅಂಕಗಳನ್ನು ಪರಿಗಣಿಸಿ ತೃತೀಯ ಭಾಷೆಗೆ ಪರ್ಯಾಯವಾಗಿ ಆಯ್ಕೆ ಮಾಡಿಕೊಂಡಿರುವ ವಿಷಯದ ಫಲಿತಾಂಶವನ್ನು ಪ್ರಕಟಿಸಿ ಪ್ರಮಾಣ ಪತ್ರ ನೀಡಲಾಗುತ್ತದೆ.

ಈ ಯೋಜನೆಯಲ್ಲಿ ಆಯ್ಕೆ ಮಾಡಿಕೊಂಡ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಪರೀಕ್ಷಾ ಚಟುವಟಿಕೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಕ್ರಮವಹಿಸುವ ಪ್ರಾಧಿಕಾರಿಗಳ ವಿವರ ಕೆಳಕಂಡಂತಿದೆ.

## 7. Schedule of NSQF exams during the academic year 2019-20

| Sl. No. | Class | Level | Question Paper Provider | Exam To Be Conducted | Evaluation Work | Tabulation of results | Declaration Of Results | Certifica-tion | Month Of Exam | Remarks |
|---|---|---|---|---|---|---|---|---|---|---|
| 1 | IX | 1 | KSEEB | School | School | School | * H.O.I | SSC | February / March | Annual exam |
| 2 | X | 2 | KSEEB | KSEEB | KSEEB | KSEEB | * H.O.I will forward practical and internal assessment marks to KSEEB | Board (marks card) & Board + SSC (Certificate) | March / April | Annual exam |

* H.O.I Stands for :Head of the Institution

## 8. Skill Sector ನಲ್ಲಿ ಆಯ್ಕೆ ಮಾಡಿಕೊಂಡ ವಿಷಯಗಳ ಪರೀಕ್ಷಾ ನಿರ್ವಹಣಾ ವಿಧಾನಗಳು:

| ಕ್ರಮ ಸಂಖ್ಯೆ | ವಿವರ | ಗರಿಷ್ಠ ಅಂಕಗಳು | ಪರೀಕ್ಷಾ ನಿರ್ವಹಣೆಯ ಸಕ್ಷಮ ಪ್ರಾಧಿಕಾರ | |
|---|---|---|---|---|
| | | | 9ನೇ ತರಗತಿ | 10ನೇ ತರಗತಿ |
| 01 | ಆಂತರಿಕ ಮೌಲ್ಯಮಾಪನ | 20 | ಮುಖ್ಯ ಶಿಕ್ಷಕರು ಶಾಲಾ ಹಂತ | ಮುಖ್ಯ ಶಿಕ್ಷಕರು ಶಾಲಾ ಹಂತ |
| 02 | ಪ್ರಾಯೋಗಿಕ ಪರೀಕ್ಷೆ | 50 | ಮುಖ್ಯ ಶಿಕ್ಷಕರು ಶಾಲಾ ಹಂತ | ಮುಖ್ಯ ಶಿಕ್ಷಕರು ಶಾಲಾ ಹಂತ |
| 03 | ತಾತ್ವಿಕ ಪರೀಕ್ಷೆ | 30 | ಮುಖ್ಯ ಶಿಕ್ಷಕರು ಶಾಲಾ ಹಂತ | ಕೆ.ಎಸ್.ಇ.ಇ.ಬಿ. |

9. ಉತ್ತೀರ್ಣತೆಯ ಮಾನದಂಡಗಳು

**Weight age of marks shall be as follows:-**

| Sl. No | Method of Assessments | Maximum & Minimum Qualifing Marks. | Methods to conduct Examination events | Assessing body /person |
|---|---|---|---|---|
| 1 | Written test | Max=30 marks minimun qualifying marks 10 | Theory examination shall be conducted for 60marks. 50% of the marks secured shall be calculated for tabulation & result processing to publish the result | Karnataka Secondary Education Examination Board. |
| 2 | Practical test & Oral test / viva voce | Max=50 marks minimum qualifying marks 18 | 30 marks-practical<br>10marks- viva<br>10marks- portpolio & assignment. | Certified Assessor by Sector Skill Council |

| | | | | |
|---|---|---|---|---|
| 3 | Internal Assessment | Max=20 marks<br>Minimum Qualifing marks is not prescribed. The Internal assessment marks obtained by the students will be included only if the student qualify individually in theory and practical as stated above. | 5 marks-Attendence<br>5 marks- Theory practical & oral test<br><br>5 marks – Activities<br>5 marks - Communication, Responsibility, Inter personal relationship, Health & Safety and Innovation and creativity | Vocational subject trainer |
| **Total** | | 100 | | |

10. ಎನ್‌ಎಸ್‌ಕ್ಯೂಎಫ್ ಯೋಜನೆಯಡಿಯಲ್ಲಿ ವೃತ್ತಿ ಶಿಕ್ಷಣ ವಿಷಯದಲ್ಲಿ ತಾತ್ವಿಕ ವಿಷಯಕ್ಕೆ 30 ಅಂಕಗಳು, ಪ್ರಾಯೋಗಿಕ ವಿಷಯಕ್ಕೆ 50 ಅಂಕಗಳಿದ್ದು, ವಿದ್ಯಾರ್ಥಿಯು ಉತ್ತೀರ್ಣನಾಗಲು ಕನಿಷ್ಠ 28 ಅಂಕಗಳನ್ನು ಗಳಿಸಬೇಕಾಗುತ್ತದೆ. ಪರೀಕ್ಷಾ ಮಂಡಳಿಯ ನಿಯಮಾನುಸಾರ ವಿದ್ಯಾರ್ಥಿಯು 28 ಅಂಕಗಳನ್ನು ಅಂದರೆ ತಾತ್ವಿಕ ವಿಷಯದಲ್ಲಿ 10 ಅಂಕಗಳನ್ನು ಮತ್ತು ಪ್ರಾಯೋಗಿಕ ವಿಷಯದಲ್ಲಿ 18 ಅಂಕಗಳನ್ನು ಗಳಿಸಿದರೆ ಮಾತ್ರ ಉತ್ತೀರ್ಣ ಎಂದು ಪರಿಗಣಿಸಲಾಗುತ್ತದೆ. ಎನ್.ಎಸ್.ಕ್ಯೂ.ಎಫ್. ಯೋಜನೆಯಡಿ ಎಲ್ಲಾ ಹಂತದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರಿಕ್ಷೆಗಳನ್ನು 50 ಅಂಕಗಳಿಗೆ ನಡೆಸುವುದು. ವಿದ್ಯಾಥಿಯು ತೇರ್ಗಡೆ ಹೊಂದಲು ಕನಿಷ್ಟ 18 ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ. ಈ ಮೇಲ್ಕಂಡ ವಿವರ ಕಾಲ ಕಾಲಕ್ಕೆ ಎನ್.ಎಸ್.ಡಿ.ಸಿ ವತಿಯಿಂದ ಜಾರಿಯಾಗುವ ಮಾರ್ಗಸೂಚಿಯಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.ತೃತೀಯ ಭಾಷೆಯ ಬದಲಾಗಿ ಆಯ್ಕೆ ಮಾಡಿಕೊಳ್ಳುವ Skill sector ನಲ್ಲಿರುವ ಒಂದು ವಿಷಯವನ್ನು ಪರ್ಯಾಯವಾಗಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತೇರ್ಗಡೆಯಾಗಲು ಶಾಲಾ ಹಂತದಲ್ಲಿನ ಆಂತರಿಕ ಮೌಲ್ಯಮಾಪನದಲ್ಲಿ (Internal Assesment)ಇಂತಿಷ್ಟೆ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.

ತಾತ್ವಿಕ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಕನಿಷ್ಠ ಅಂಕಗಳನ್ನು ಗಳಿಸಿ, ಉತ್ತೀರ್ಣರಾದರೆ ಮಾತ್ರ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಗಣಿಸಲಾಗುವುದು. ವಿದ್ಯಾರ್ಥಿಯು ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಮುಖ್ಯ ಶಿಕ್ಷಕರು / ಉಪ ಪ್ರಾಂಶುಪಾಲರು ತರಬೇತುದಾರರಿಂದ ಪಡೆದು ಪರೀಕ್ಷಾ ಮಂಡಳಿಗೆ ಕಾಲಮಿತಿ ನಿರ್ದೇಶನದಂತೆ ಸಲ್ಲಿಸಬೇಕಾಗುತ್ತದೆ.

11. ಎನ್.ಎಸ್.ಕ್ಯೂ.ಎಫ್. ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯ ವಿನಾಯಿತಿ ನೀಡಿರುವುದರಿಂದ 3ನೇ ಭಾಷೆಯ ವೇಳಾಪಟ್ಟಿಯ ಅವಧಿಯಲ್ಲಿ ಎನ್.ಎಸ್.ಕ್ಯೂ.ಎಫ್. ವಿಷಯವನ್ನು ಬೋಧಿಸಲು ವೇಳಾಪಟ್ಟಿಯನ್ನು ಮುಖ್ಯ ಶಿಕ್ಷಕರು ಅಳವಡಿಸುವುದು. ಇನ್ನು ಹೆಚ್ಚಿನ ಅವಧಿಗಳು ಅಗತ್ಯವಿದ್ದಲ್ಲಿ ಶಾಲೆಯ ಪ್ರಾರಂಭದ ಅವಧಿಯ ಮುನ್ನ/ಶಾಲೆಯ ಅವಧಿ ಮುಗಿದ ನಂತರ/ಶನಿವಾರ/ಇನ್ನಿತರ ರಜಾ ದಿನಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಸ್ಥಳೀಯ ಅನುಕೂಲದ ಪ್ರಕಾರ ಹೆಚ್ಚಿನ ಅವಧಿಗಳನ್ನು ಅಳವಡಿಸುವ ಬಗ್ಗೆ ಮುಖ್ಯ ಶಿಕ್ಷಕರು ನಿರ್ಧರಿಸುವುದು. ಈ ಪ್ರಕಾರ ಹೆಚ್ಚಿನ ಅವಧಿಗಳನ್ನು ಸಿದ್ಧಪಡಿಸುವ ವೇಳಾಪಟ್ಟಿಯನ್ನು ಜಿಲ್ಲಾ ಉಪನಿರ್ದೇಶಕರಿಂದ ಅನುಮೋದನೆಯನ್ನು ಪಡೆಯುವುದು.

12. ವೃತ್ತಿ ಶಿಕ್ಷಣದ ತಾತ್ವಿಕ ಅಥವಾ ಪ್ರಾಯೋಗಿಕ ವಿಷಯಗಳ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ತೇರ್ಗಡೆ ಹೊಂದದಿದ್ದಲ್ಲಿ ಪೂರಕ ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸುವುದು.

13. ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಶಿಕ್ಷಕರಿಗೆ, ಎಸ್.ಡಿ.ಎಂ.ಸಿ. ಸದಸ್ಯರುಗಳಿಗೆ, ಉದ್ಯಮಿದಾರರಿಗೆ, ಶಾಲೆಯ ಸಿಬ್ಬಂದಿ ವರ್ಗದವರಿಗೆ ಶಾಲೆಯ ಪ್ರಾರಂಭದಲ್ಲಿ ಎನ್.ಎಸ್.ಕ್ಯೂ.ಎಫ್. ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಹಮ್ಮಿಕೊಳ್ಳುವ ಬಗ್ಗೆ ಶಾಲೆಯ ಮುಖ್ಯಸ್ಥರು ಕ್ರಮಹಿಸುವುದು.

14. ಪರೀಕ್ಷಾ ಪದ್ಧತಿ, ಮೌಲ್ಯಮಾಪನ ಫಲಿತಾಂಶ ಪ್ರಕಟಣೆ, ಅಂಕಪಟ್ಟಿ ಹಾಗೂ ಇನ್ನಿತರ ಪರೀಕ್ಷಾ ವಿಷಯಗಳಿಗೆ ಮೇಲ್ಕಂಡಂತೆ ವಿವರಿಸಿರುವ ಪ್ರಕಾರ ಹಾಗೂ ಇನ್ನಿತರ ವಿಷಯಗಳಲ್ಲಿ ಪ್ರಸ್ತುತ ಇರುವ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ನಿಯಮಗಳೇ ಎನ್.ಎಸ್.ಕ್ಯೂ.ಎಫ್. ಯೋಜನೆಗೆ ಅನ್ವಯಿಸಲಾಗುವುದು.

**15. <u>Sector Skill ನಲ್ಲಿ ಆಯ್ಕೆ ಮಾಡಿಕೊಳ್ಳುವ ವಿಷಯಗಳ ವಿಷಯ ಸಂಕೇತ ವಿವರ:-</u>**

| ಕ್ರಸಂ | ವಿಷಯ (Subject) | ವಿಷಯ ಸಂಕೇತ |
|---|---|---|
| | | Theory& Practical |
| 1 | ಮಾಹಿತಿ ತಂತ್ರಜ್ಞಾನ (Information Technology) | 86 |
| 2 | ರೀಟೇಲ್ (Retail) | 87 |
| 3 | ಆಟೋಮೋಟೀವ್ (Auto motive) | 88 |
| 4 | ಹೆಲ್ತ್ ಕೇರ್ (Health Care) | 89 |
| 5 | ಬ್ಯೂಟಿ ಮತ್ತು ವೆಲ್‌ನೆಸ್ (Beauty & Wellness)I | 90 |

ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಪಾಲಿಸಿ ಈ ಯೋಜನಾ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಉಪನಿರ್ದೇಶಕರು(ಆಡಳಿತ)/ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಸಂಬಂಧಿಸಿದ ಶಾಲಾ ಮುಖ್ಯಸ್ಥರುಗಳು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ.

(ವಿ. ಸುಮಂಗಲ) 19/7
ನಿರ್ದೇಶಕರು, ಪರೀಕ್ಷೆಗಳು

<u>ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.</u>

1. ರಾಜ್ಯದ ಆಯ್ದ 150 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಪರಿಶೀಲನಾ ಶಾಖೆಗಳ ಮೂಲಕ).
2. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮೂಲಕ).
3. ರಾಜ್ಯದ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ,.ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ(ಪರಿಶೀಲನಾ ಶಾಖೆಗಳ ಮೂಲಕ).
4. ರಾಜ್ಯದ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ) ಅವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಬಗ್ಗೆ ಮಾಹಿತಿ ಹಾಗೂ ದೃಢೀಕರಣ ನೀಡಲು ತಿಳಿಸಿದೆ.
5. ಮಂಡಳಿಯಲ್ಲಿನ ಆಪ್ತ ಶಾಖೆಗೆ/ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
6. ಶಾಖಾಧಿಕಾರಿಗಳು, ಗಣಕಶಾಖೆರವರಿಗೆ ಎಸ್‌ಎಟಿಎಸ್ ಜಾಲತಾಣದಲ್ಲಿ ಮತ್ತು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.
7. ಶಿಕ್ಷಣ ವಾರ್ತೆ
8. ಕಛೇರಿ ಪ್ರತಿ.

<u>ಪ್ರತಿಯನ್ನು ಗೌರವಪೂರ್ವಕವಾಗಿ:-</u>

1. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ,
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ಆರ್‌ಎಂಎಸ್‌ಎ, ನೃಪತುಂಗ ರಸ್ತೆ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
5. ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ, ಬೆಂಗಳೂರು.